

'ಲಾಸ್ ಗ್ಲೇಸಿಯರ್ಸ್ ನ್ಯಾಷನಲ್ ಪಾರ್ಕ್'ನಲ್ಲಿ ದಟ್ಟೈಸಿದ ಹಿಮಗಲ್ಲುಗಳನ್ನು ವೀಕ್ಷಿಸಲು ಬಂದ ಪ್ರವಾಸಿಗರು

ತೆಹುಯೆಲ್ಚೆ ಎಂಬ ವಲಸಿಗ ಬುಡಕಟ್ಟು ಜನರು ಒಮ್ಮೆ ಚಳಿಗಾಲದಲ್ಲಿ ವಲಸೆ ಹೋಗುವಾಗ, ನಡೆಯಲಾಗದ ಸ್ಥಿತಿಯಲ್ಲಿದ್ದ ಒಬ್ಬ ವೃದ್ಧ ಮಹಿಳೆಯನ್ನು ಗುಹೆಯೊಂದರಲ್ಲಿ ಬಿಟ್ಟು ಹೋದರಂತೆ. ಆಕೆಯನ್ನು ಪ್ರಕೃತಿಯು ಕ್ಯಲಾಫೆಟೆ ಪೊದೆಯನ್ನಾಗಿ ಮಾರ್ಪಡಿಸಿತಂತೆ. ಚಳಿಯಲ್ಲಿ ಹಕ್ಕಿಗಳಿಗೆ ಆಶ್ರಯ ನೀಡಿ, ನಂತರ ಹೂ ಬಿಟ್ಟು ಇದೇ ಹಕ್ಕಿಗಳಿಗೆ ಹಣ್ಣುಗಳನ್ನು ನೀಡುವುದೇ ಈಕೆಯ ಕಾಯಕವಾಯಿತಂತೆ.

ಇನ್ನೊಂದು ಕಥೆಯಿದೆ. ಸ್ಥಳೀಯ ಬುಡಕಟ್ಟಿನ ರಾಜನ ಸುಂದರ ಮಗಳು, ವಿರೋಧಿ ಬುಡಕಟ್ಟಿಗೆ ಸೇರಿದ ಯುವಕನನ್ನು ಪ್ರೇಮಿಸಿ, ಓಡಿಹೋಗುವ ಪ್ರಯತ್ನದಲ್ಲಿದ್ದಾಗ, ತಂದೆಗೆ ವಿಷಯ ತಿಳಿಯಿತು. ಅವನು ಮಾಂತ್ರಿಕನ ಮೊರೆಹೋದ. ಮಾಂತ್ರಿಕ ಈ ಸುಂದರ ಯುವತಿಯನ್ನು ಕ್ಯಲಾಫೆಟೆ ಪೊದೆಯನ್ನಾಗಿ ಮಾಡಿಬಿಟ್ಟ. ಆಕೆಯ ಪ್ರಿಯತಮ ಮುಟ್ಟದಂತೆ ಪೊದೆಯ ತುಂಬಾ ಮುಳ್ಳುಗಳನ್ನು ಮೂಡಿಸಿದ. ಹಳದಿ ಬಣ್ಣದ ಹೂವುಗಳಾಗಿದ್ದ ಆಕೆಯ ಹೊಳಪು ಕಣ್ಣುಗಳನ್ನು ಪ್ರಿಯತಮ ನೋಡಿ ಬಿಕ್ಕಿಬಿಕ್ಕಿ ಕಣ್ಣೀರಿಟ್ಟು, ಕೊರಗಿ ಸತ್ತ. ಪಶ್ಚಾತ್ತಾಪಪಟ್ಟ ಮಾಂತ್ರಿಕ, ಹಳದಿ ಹೂಗಳನ್ನು ಹಣ್ಣುಗಳನ್ನಾಗಿಸಿ, ಪ್ರಿಯಕರನ ಹೃದಯವನ್ನು ಅದರಲ್ಲಿ ಸೇರಿಸಿದ. ಆ ಮೂಲಕ ಪ್ರೇಮಿಗಳನ್ನು ಒಂದು ಮಾಡಿದ.

ಕ್ಯಲಾಫೆಟೆ ಹಣ್ಣುಗಳಿಂದ ಜೆಲ್ಲಿ, ಜಾಮ್, ಐಸ್ ಕ್ರೀಮ್, ಕ್ಯಾಂಡಿ ಹಾಗೂ ಕ್ಯಲಾಫೆಟೆ ಸೋರ್ ಎಂಬ ಕಾಕ್‌ಟೇಲ್ ಕೂಡ ಈಗ ಸಿಗುತ್ತದೆ. ಲೇಡಿ ಫ್ಲಾರೆನ್ಸ್ ಡಿಕ್ಸೀ ಎಂಬ ಸ್ಕಾಟಿಷ್ ಲೇಖಕಿ ಒಂದೂ ಕಾಲು ಶತಮಾನದ ಹಿಂದೆಯೇ ತನ್ನ 'ರೈಡಿಂಗ್ ಅಕ್ರಾಸ್ ಪ್ಯಟಗೋನಿಯಾ' ಎಂಬ ಪ್ರವಾಸ ಕಥನದಲ್ಲಿ ಈ ಹಣ್ಣುಗಳ ರುಚಿಯನ್ನು ಬಣ್ಣಿಸಿದ್ದಾರೆ. ಚಾರ್ಲ್ಸ್ ಡಾರ್ವಿನ್ ಕೂಡ ಈ ಹಣ್ಣಿನ ಬಗ್ಗೆ ದಾಖಲಿಸಿದ್ದಾರೆ.

## ಜೀವವೈವಿಧ್ಯದ ಆಗರ

ಒಂಟೆ ಜಾತಿಗೆ ಸೇರಿರುವ ಲಾಮಾ ಗ್ವಾನಾಕೋ, ಕೆಂಬಣ್ಣದ ನರಿಗಳು, ಮೈತುಂಬಾ ತುಪ್ಪಳವಿರುವ ಹಂದಿಯಂತೆ ಮೂತಿಯಿರುವ ಸ್ಕಂಕ್ ಪ್ರಾಣಿ, ಆಸ್ಟ್ರಿಚ್ ಜಾತಿಯ ಹಾರಲಾಗದ ರಿಯಾ ಹಕ್ಕಿಗಳು, ಮಾಸಲು ಹಳದಿ ಬಣ್ಣದ ಕುತ್ತಿಗೆಯ ಐಬಿಸ್ ಹಕ್ಕಿಗಳು, ಸರೋವರದ ತೀರದಲ್ಲಿ ಕಂಡುಬರುವ ಅಪ್‌ಲ್ಯಾಂಡ್ ಗೀಸ್ ಎಂಬ ಹೆಸರಿನ ಬಾತುಗಳ ಗುಂಪು, ಎತ್ತರದಲ್ಲಿ ಹಾರುತ್ತಿರುವ ಬೃಹತ್ ಗಾತ್ರದ ಅಗಲವಾದ ರೆಕ್ಕೆಗಳುಳ್ಳ ಆಂಡಿಯನ್ ಕಾಂಡೋರ್ ಎಂಬ ರಣಹದ್ದು, ಕಾಡುಗಳಲ್ಲಿ ಪ್ಯೂಮಾ ಎಂಬ ಬೇಟೆಗಾರ ಚಿರತೆ, ಹ್ಯೂಮುಲ್ ಎಂಬ ಆಂಡಿಯನ್ ಜಿಂಕೆ, ಕಿಚಕಿಚನೆ ಅರಚುತ್ತಾ ಹಾರುವ ಆಸ್ಟ್ರಲ್ ಗಿಣಿಗಳು, ಮರವನ್ನು ಕುಟ್ಟುತ್ತಿರುವ ಉಜ್ವಲ ಕೆಂಬಣ್ಣದ ತಲೆಯ ಪ್ಯಾಟಗೋನಿಯಾ ಮರಕುಟಿಕ, ಕತ್ತಲಾಗಲು ಕಾಯುತ್ತಾ ಮರೆಯಲ್ಲಿ ಕುಳಿತಿರುವ ಆಸ್ಟ್ರಲ್ ಪಿಗ್ಮಿ ಗೂಬೆ, ಸರೋವರ ಅಥವಾ ನದೀ ತಟದಲ್ಲಿ ಕಾಣುವ ಕೂಟ್ ಹಾಗೂ ಇತರ ಬಾತುಗಳು, ಅದರಲ್ಲೂ ಅತ್ಯಂತ ಸುಂದರವಾದ ಕೇಸರಿ ಬಣ್ಣದ ಕೊಕ್ಕಿನ ಪ್ಯಾಟಗೋನಿಯಾ ಟೊರೆಂಟ್ ಬಾತು... ನಿಸರ್ಗ ಇಲ್ಲಿ ಸ್ವರ್ಗದಂತಿದೆ.

ಪೆರಿಟೊ ಮೊರಿನೊ ಗ್ಲೇಸಿಯರ್ ಸ್ವಪ್ನದಲ್ಲೂ ಕಾಡುವಂತಹ ಸ್ವರ್ಗಸದೃಶ ಸ್ಥಳ.

ಪ್ರತಿಕ್ರಿಯಿಸಿ: feedback@sudha.co.in

